ಮುಂದೂಡಲಾಗಿದ್ದ ಪ್ರಶ್ನೆ: ೨೨(ಳಲ)

**ಶ್ರೀ ಕೆ. ಹೆಚ್. ಪಾಟೀಲ್.**—ತಾವು ಕರೆದಾಗ ಸಂಬಂಧಪಟ್ಟ ಮಂತ್ರಿಗಳಲ್ಲುದಿರುವುದು ಸೂಕ್ತವಲ್ಲ. ಇಲ್ಲ ಹೀಗಾಗಬಾರದು. ಏತಕ್ಕೆ ಈ ರೀತಿ ಆಗುತ್ತಿದೆ ?

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**—ಈ ಪ್ರಶ್ನೆಯನ್ನು ನಾನು ಹಿಂದೆ ಎತ್ತಿದಾಗ ಇನ್ನೊಂದು ದಿವಸ ನೀವು ಕೇಳಿದ ಮಾಹಿತಿಯನ್ನು ಒದಗಿಸಿ ಉತ್ತರ ಕೊಡುತ್ತೇವೆಂದು ಹೇಳಿದರು. ಆದರೆ ನನಗೆ ಇವತ್ತಿನವರೆಗೂ ಉತ್ತರದ ಪ್ರತಿ ಬಂದಿಲ್ಲ.

**ಅಧ್ಯಕ್ಷರು.**—ಪ್ರಶ್ನೆ ಅಜೆಂಡಾದಲ್ಲಿ ಇರುತ್ತದೆ. ನಿಮಗೆ ಉತ್ತರ ಬೇಕಾದರೆ ಕಛೇರಿಯಲ್ಲಿ ತೆಗೆದುಕೊಳ್ಳಬೇಕು.

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**—ಮನೆಮನೆಗೆ ಹೋಗಿ ತೆಗೆದುಕೊಳ್ಳಬೇಕೆ ? ಉತ್ತರವನ್ನು ಟೇಬಲ್ ಮೇಲೆ ಇಡಬೇಕು. ನನಗೆ ಇದನ್ನು ಹೊಸದಾಗಿ ಹೇಳಬೇಡಿ. ತಮಗೆ ನಾನು ಗೌರವ ಕೊಡುತ್ತೇನೆ. ಆದರೆ ಅವರ ಮನೆಗೆ ಹೋಗಿ ತೆಗೆದುಕೊಳ್ಳುವುದಕ್ಕೆ ನಾನು ತಯಾರಿಲ್ಲ. ಈ ಸಭೆಯ ಮಂದಿರತಕ್ಕ ಟೇಬಲ್ ಮೇಲೆ ಇರಿಸಿದರೆ ನಾನು ನೋಡುತ್ತೇನೆ.

**ಶ್ರೀ ಹೆಚ್. ಡಿ. ದೇವೇಗೌಡ.**—ಇದಕ್ಕೆ ಇಷ್ಟು ಉದ್ವೇಗದ ಚರ್ಚೆಯಂ ಅವಶ್ಯಕತೆ ಇಲ್ಲ. ಅಜೆಂಡಾದಲ್ಲಿ ಪ್ರಶ್ನೆ ಹಾಕಿದ್ದೀರಿ. ಮಾನ್ಯ ಸದಸ್ಯರು ಕೆಲವು ವಿವರಣೆಗಳನ್ನು ಕೇಳಿದ್ದಾರೆ. ಅವುಗಳನ್ನು ನಾನು ತರಿಸಿಕೊಡಬೇಕಾಗಿದೆ. ಆದ್ದರಿಂದ, ದಯಮಾಡಿ ಈ ಪ್ರಶ್ನೆಯನ್ನು ತಡೆಹಿಡಿಯಂ ಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳಂ

**ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಮಂತ್ರಿಗಳು).**—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮಂದಿಡಲಾಗಿದೆ.

**ಅಧ್ಯಕ್ಷರು.**—ಉತ್ತರಗಳನ್ನು ಮಂಡಿಸಲಾಯಿತು.

ಕರ್ನಾಟಕದಲ್ಲಿ ಸೋಲಿಗ ಸಮಾಜದ ಜನಸಂಖ್ಯೆ.

೨೭೧. **ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)** ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಸೋಲಿಗ ಸಮಾಜದ ಜನಾಂಗದವರು ಕರ್ನಾಟಕದ ಯಾವ ಭಾಗದಲ್ಲಿದ್ದಾರೆ: ಮತ್ತು ಈ ಸಮಾಜದ ಒಟ್ಟಾರೆ ಜನಸಂಖ್ಯೆ ಎಷ್ಟು: (ಗಂಡಸರ ಮತ್ತು ಹೆಂಗಸರ ಸಂಖ್ಯೆಗಳನ್ನು ಪ್ರತ್ಯೇಕವಾಗಿ ತಿಳಿಸಂವುದು.)

ಆ) ಸೋಲಿಗ ಸಮಾಜದ ಅಭಿವೃದ್ಧಿಗಾಗಿ ಸರ್ಕಾರದವರು ಹಮ್ಮಿಕೊಂಡ ಕಾರ್ಯಕ್ರಮಗಳೇನು ?

ಇ) ಸೋಲಿಗ ಸಮಾಜ ಮಾತೃ ಭಾಷೆ ಯಾವುದು ?

ಈ) ಸೋಲಿಗ ಸಮಾಜದಲ್ಲಿ ಅಕ್ಷರಸ್ಥರ ಸಂಖ್ಯೆ ಎಷ್ಟು ? ಹಾಗೂ ಸರ್ಕಾರಿ ಅಥವಾ ಖಾಸಗಿ ನೌಕರಿಯಲ್ಲಿ ಇರತಕ್ಕಂಥ ಜನಸಂಖ್ಯೆ ಎಷ್ಟು ?

**ಶ್ರೀ ವಿ. ಎಸ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).**—

ಅ) ಸೋಲಿಗ ಜನಾಂಗದವರು ಕರ್ನಾಟಕದಲ್ಲಿ ಮೈಸೂರು, ಮಡಕೇರಿ, ಚಿಕ್ಕಮಗಳೂರು, ಬೆಂಗಳೂರು ಹಾಸನ, ಮಂಡ್ಯ, ತುಮಕೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿದ್ದಾರೆ. ಸಮಾಜದ ಒಟ್ಟಾರೆ ಜನಸಂಖ್ಯೆ ೧೦,೯೮೩ ಇವರಲ್ಲಿ ೫೮೮೪ ಗಂಡಸರು ಮತ್ತು ೫೧೨೯ ಹೆಂಗಸರು.

ಆ) ಸೋಲಿಗರಿಗಾಗಿಯೇ ಯಾವ ವಿಶೇಷ ಯೋಜನೆಯನ್ನು ರೂಪಿಸಿಲ್ಲ. ಆದರೆ ಗಿರಿಜನ ಉಪಯೋಜನೆಯಲ್ಲಿ ಸೋಲಿಗ ಜನಾಂಗಕ್ಕೆ ಸವಲತ್ತುಗಳನ್ನು ಒದಗಿಸಲಾಗುತ್ತಿದೆ.

೩) ಕನ್ನಡ

ಈ) ಸೋಲಿಗ ಸಮಾಜದಲ್ಲಿ ೧೨೫೬ ಮಂದಿ ಅಕ್ಷರಸ್ಥರಿದ್ದಾರೆ. ಸರ್ಕಾರಿ ಅಥವಾ ಖಾಸಗಿ ನೌಕರಿಯಲ್ಲಿರುವ ಸೋಲಿಗರ ಬಗ್ಗೆ ಮಾಹಿತಿ ಲಭ್ಯವಿಲ್ಲ.

## BACKWARD CLASSES COMMISSION.

315. SMT LEELADEVI R. PRASAD (Athani) will the Minister for Social welfare be Pleased to State.—

1) Whether the Karnataka II Backward Classes Commission constituted by Government under the Chairmanship of Sri T. Venkata swany has submitted its Interim Report ?

2) Whether the State Government is aware of the fact that the Supreme Court has announced its judgment in the writ petitions filed against Government orders issued in pursuance of the Havanoor Commission Report?

3) Whether the State Government have directed Sri T. Venkataswany Commission to follow the guidelines of the Supreme Court in finalising its report ?

4) What is the time prescribed for submission of Report by the said Commission ?

SRI V. L. PATIL (Minister for Social welfare).—

1) No.

2) Yes.

3) Yes.

4) 2½ Years.

## ಶಿಕಾರಿಪುರ ತಾಲ್ಲೂಕಿನ ಕಲ್ಲುವಡ್ಡು ಯೋಜನೆ.

೩೧೪ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಜಲಾಯನದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ದಯೆಯಿಟ್ಟು ಉತ್ತರಿಸುವರೆ ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಕಲ್ಲುವಡ್ಡು ಹಳ್ಳ ಯೋಜನೆ ಪ್ರಾರಂಭವಾಗಿದ್ದು, ಅದಕ್ಕೆ ಸುಮಾರು ೧೦ ಲಕ್ಷ ರೂಪಾಯಿ ಖರ್ಚು ಮಾಡಿ ಈಗ ಕೆಲಸ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಈ ವರ್ಷವೇ ಈ ಕೆಲಸ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ನಿಲ್ಲಿಸಿರುವ ಯೋಜನೆಯನ್ನು ಮುಂದೆ ತೆಗೆದುಕೊಳ್ಳುವುದರ ಬಗ್ಗೆ ಪರಿಶೀಲಿಸಲಾಗುತ್ತಿದೆ.